ಆ) ಈ ಕಾಮಗಾರಿಗಳಿಗೆ 2004–05ನೇ ಸಾಲಿನಲ್ಲಿ 33.00 ಲಕ್ಷ ರೂ.ಗಳು ಹಾಗೂ 2005–06ನೇ ಸಾಲಿನಲ್ಲಿ 33.90 ಲಕ್ಷ ರೂ.ಗಳ ಅನುದಾನವನ್ನು ಒದಗಿಸಲಾಗಿತ್ತು.

ಇ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳು ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

1067 (1090) ಶ್ರೀ ರಘುಪತಿ ಭಟ್ ಕೆ. (ಉಡುಪಿ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕಂದಾಯ ಇಲಾಖೆಯಡಿ ದುಡಿಯುತ್ತಿರುವ 10450 ಗ್ರಾಮಸಹಾಯಕರನ್ನು ಖಾಯಂಗೊಳಿಸಿ ಸೇವಾ ಭದ್ರತೆಯನ್ನು ನೀಡದೆ ಉಂಟಾಗಿರುವ ಸಮಸ್ಯೆಯು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳದಿರಲು ಕಾರಣವೇನು?

ಇ) ಪ್ರಸ್ತುತ ಗ್ರಾಮಸಹಾಯಕರನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಈ) ಈ ನೌಕರರಿಗೆ ಸೇವಾ ಭದ್ರತೆ ನೀಡುವರೆ : ಸೇವಾನಿಯಮಾವಳಿ ರಚಿಸಿ, ಸೇವಾ ಭದ್ರತೆ ನೀಡಿ ಸರ್ಕಾರಿ ನೌಕರರ ಸೌಲಭ್ಯವನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು.

ಆ) ಇ) ಮತ್ತು ಈ) ಕರ್ನಾಟಕ ಗ್ರಾಮಕಛೇರಿಗಳ ರದ್ದತಿ ಕಾಯ್ದೆ 1961ರ ಸೆಕ್ಷನ್ 4ರಡಿಯಲ್ಲಿ ಎಲ್ಲಾ ಅನುವಂಶಿಕವಾದ ಗ್ರಾಮಮಟ್ಟದ ಎಲ್ಲಾ ಹುದ್ದೆಗಳನ್ನು ದಿ. 1.2.63ರಿಂದ ಜಾರಿಗೆ ಬರುವಂತೆ ರದ್ದುಗೊಳಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಆರ್.ಡಿ.3 ಎಂ.ವಿ.ಎಸ್.77, ದಿ. 16.9.78ರಲ್ಲಿ ಅನುವಂಶಿಕವಾಗಿ ಕೆಳದರ್ಜೆಯ ಗ್ರಾಮ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಓದು ಬರಹ ಬಲ್ಲ 25ರಿಂದ 65 ವರ್ಷದೊಳಗಿನ ವ್ಯಕ್ತಿಗಳನ್ನು ಅಗತ್ಯಕ್ಕೆ ಅನುಗುಣವಾಗಿ ಗ್ರಾಮಸಹಾಯಕರಾಗಿ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಯಿತು. ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಲ್ಲಿ ಗ್ರಾಮಸಹಾಯಕರನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ಹೇಳಿದ್ದರೂ ಸಹ ಕಂದಾಯ ವಸೂಲಿಗಾಗಿ ಹುದ್ದೆಗಳ ಅವಶ್ಯಕತೆ ಗಮನಿಸಿ ಇಲ್ಲಿಯವರೆಗೆ ತಾತ್ಕಾಲಿಕವಾಗಿ ಮುಂದುವರಿಸಿ ಕೊಂಡುಬರಲಾಗುತ್ತಿದೆ. ಮಿತವೇತನದ ಆಧಾರದ ಮೇಲೆ ಹುದ್ದೆಗಳನ್ನು ಸೃಷ್ಟಿಸಿರುವುದರಿಂದ ಕನಿಷ್ಟವೇತನ ನಿಗದಿಪಡಿಸಲು, ಸೇವಾ ಭದ್ರತೆ ಒದಗಿಸಲು ಅವಕಾಶ ಇರುವುದಿಲ್ಲ.

1068 (1474) ಶ್ರೀ ರಮೇಶ್‌ಕುಮಾರ್ ಕೆ.ಆರ್. (ಶ್ರೀನಿವಾಸಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳ ವ್ಯಾಪ್ತಿಯಲ್ಲಿ ಬರುವ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣ ಎಷ್ಟು;

ಇ) 1956 ರಿಂದ ಇಲ್ಲಿಯವರೆವಿಗೂ ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳ ಅಭಿವೃದ್ಧಿಗೆ ಖರ್ಚಾಗಿರುವ ಹಣ ಎಷ್ಟು;